ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :- 45(93)

ಶ್ರೀ ಕೆ.ವಿ.ವಿರುಪಾಕ್ಷಪ್ಪ (ಸಿಂಧನೂರು)

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸಿಂಧನೂರಿನಲ್ಲಿ ಸಿವಿಲ್ ಜಡಗ್ಜಕೋರ್ಟ್ ಪ್ರಾರಂಭಿಸುವ ಬಗ್ಗೆ ಸರ್ಕಾರದವರು ಪರಿಶೀಲಸುವರೆ?

ಆ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ.ಪಿ. ನಾಣಯ್ಯ (ಕಾನೂನು ಮತ್ತು ವಾರ್ತಾ ಸಚಿವರು):- ಸಿಂಧನೂರಿನಲ್ಲಿ ಸಿವಿಲ್ ಕೋರ್ಟ್‌ನ್ನು ಪ್ರಾರಂಭಿಸುವ ಬಗ್ಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಪರಿಶೀಲಿಸಿದ್ದು, ಸದ್ಯಕ್ಕೆ ಆ ವಿಷಯವನ್ನು ಮುಂದೂಡಲಾಗಿದೆ.

ಉಚ್ಚ ನ್ಯಾಯಾಲಯದ ಶಿಫಾರಸ್ಸು ಬಂದ ನಂತರ, ಅದನ್ನು ಪರಿಶೀಲಿಸಲಾಗುವುದು.

ವಿಷಯ:- 95-96ನೇ ಸಾಲಿನಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿಗಾಗಿ ಖರ್ಚು ಮಾಡಿರುವ ಹಣದ ವಿವರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 46 (131)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಲೋಕೋಪಯೋಗಿ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿಗಾಗಿ 30 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಗುರಿ ಹಾಕಿಕೊಂಡಿದ್ದು ನಿಜವೆ?

ಆ) 31.3.1996 ರೊಳಗೆ ಇದಕ್ಕಾಗಿ ಬಿಡುಗಡೆ ಆದ ಎಷ್ಟು ಹಾಗೂ ಖರ್ಚಾದ ಹಣ ಎಷ್ಟು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):- 1995-96ನೇ ಸಾಲಿನಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿಗಾಗಿ 80.00 ಲಕ್ಷ ರೂ.ಗಳ ಅಂದಾಜಿನ ಕಾಮಗಾರಿಗಳನ್ನು ತೆಗೆದುಕೊಳ್ಳುವ ಯೋಜನೆಯನ್ನು ಕೈಗೊಳ್ಳಲಾಗಿದ್ದು, ಆ ಸಾಲಿನಲ್ಲಿ 10.00 ಲಕ್ಷ ರೂ.ಗಳನ್ನು ವೆಚ್ಚ ಮಾಡುವ ಗುರಿ ಹಾಕಿಕೊಳ್ಳಲಾಗಿತ್ತು.

1995-96ನೇ ಸಾಲಿನಲ್ಲಿ ಈ ಯೋಜನೆಗೆ ನಿಗಧಿ ಮಾಡಿದ ಅನುದಾನ 2120.00 ಲಕ್ಷ ರೂ.ಗಳು. ವೆಚ್ಚವಾಗಿರುವುದು 939.57 ಲಕ್ಷ ರೂ.ಗಳು.

ವಿಷಯ:- ಸಾರಾಯಿ ಹರಾಜಿಗೆ ಟೆಂಡರ್ ಕರೆಯದೇ ಇರುವ ಬಗ್ಗೆ.

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 49(128)

ಶ್ರೀ ಯು.ಬಿ.ಬಣಾಕರ (ಹಿರೇಕೆರೂರು):- ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?